

ಸಂಗೀತ ಮತ್ತು ನೃತ್ಯದ ಗುಂಗಿನಲ್ಲಿ ಧುಮುಕಲು ಮಾನಸಿಕವಾಗಿ ಸಿದ್ಧರಾಗಿರುತ್ತಾರೆ. ಆದರೆ, ವೇದಿಕೆಯ ಮೇಲೆ ಆಯೋಜಿತ ಪ್ರದರ್ಶನ ನೋಡಲು ಬರುವವರೆಲ್ಲರೂ ಭಕ್ತರೇನೂ ಅಲ್ಲ. ಅವರಿಗೆ ಅಲ್ಲಿ ಸಂಗೀತ ಮತ್ತು ನೃತ್ಯದಷ್ಟೇ, ಅದರಲ್ಲಿ ಬರುವ ವಿಷಯಗಳು ಮುಖ್ಯ. ಅಂದರೆ 'ಫಾರ್ಮ್' ಮತ್ತು 'ಕಂಟೆಂಟ್' ಎರಡನ್ನೂ ಅವರು ಗಂಭೀರವಾಗಿ ಗಮನಿಸುವವರು. ಅಲ್ಲಿ ರಸಾನುಭೂತಿಯನ್ನು ಸೃಷ್ಟಿಸುವುದು ಕಲಾವಿದರ ಜವಾಬ್ದಾರಿ. ಹೀಗಿದ್ದಾಗ ನಾವು ದೇವಸ್ಥಾನ ಕೇಂದ್ರಿತವಾದ ನೃತ್ಯವನ್ನು ಇಲ್ಲಿ ಪ್ರಸ್ತುತಪಡಿಸುವಾಗ ಹೆಚ್ಚುವರಿಯಾಗಿ ಕೆಲಸ ಮಾಡಬೇಕಾಯಿತು. ಆಧುನಿಕ ರಂಗಭೂಮಿಯ ಪ್ರೇಕ್ಷಕರ ನಿರೀಕ್ಷೆಗನುಗುಣವಾಗಿ, ಮಣಿಪುರಿ ನೃತ್ಯದ ಸಮೃದ್ಧಿಯನ್ನು ಕಲುಷಿತಗೊಳಿಸದೇ, ಆಶಯಕ್ಕೆ ಧಕ್ಕೆ ಬಾರದಂತೆ ಬದಲಾವಣೆಗಳನ್ನು ಮಾಡಬೇಕಿತ್ತು. ವೇದಿಕೆಯ ಮೇಲೆ 'ಜವೇರಿ ಸೋದರಿಯರು' ನೃತ್ಯ ಪ್ರಸ್ತುತಪಡಿಸುವವರು ಎಂಬ ಘೋಷಣೆ ಮಾಡುತ್ತಿದ್ದರು. ಆದರೆ, ಅದಕ್ಕಾಗಿ ಹಿನ್ನೆಲೆಯ